ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 18-11-2022 ರಂದು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.ವಿ. ಎಸ್. ಬಂಗಾರಿ ವಕೀಲರಿಂದಃ**

5. ಸರ್ವೇ ನಂ.443/7 ಶೇತ್ಕಿ ಜಮೀನು ಎಂದರೆ ನಿಜ. ಸದರಿ ಜಮೀನು ತಹಶೀಲ್ದಾರ ವ್ಯಾಪ್ತಿಗೆ ಒಳಪಡುತ್ತದೆ ಎಂದರೆ ನಿಜ. ಶೇತ್ಕಿ ಜಮೀನು ಪಂಚಾಯತಿಯ ಆಡಳಿತಕ್ಕೆ ಒಳಪಡುವುದಿಲ್ಲ ಎಂದರೆ ನಿಜ. ಶೇತ್ಕಿ ಜಮೀನು ಬಿನ್ ಶೇತ್ಕಿ ಮಾಡಿಸದೇ ಗ್ರಾಮ ಪಂಚಾಯತಿಗೆ ಖಾತೆ ಮಾಡಿಸಲು ಬರುವುದಿಲ್ಲ ಎಂದರೆ ಸಾಕ್ಷಿ ಸದರಿ ದಾವಾ ಆಸ್ತಿ ಖಾತೆ ಆಗಿದೆ ಎಂದು ಹೇಳುತ್ತಾರೆ. ಪ್ರತಿವಾದಿ ಪಂಚಯತಿ ದಾಖಲೆಯಲ್ಲಿ ಖಾತಾ ಮಾಡಿಸಿದ್ದಾನೆ ಎಂದು ತೋರಿಸಲು ನಾನು ಪಂಚಾಯತಿಯ ಠರಾವನ್ನು ಹಾಜರು ಮಾಡಿದ್ದೇನೆ. ನಿಪಿಃ 16 ನ್ನು ಪಂಚಾಯತಿಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿಸಿದ ದಾಖಲೆ ಎಂದರೆ ಸರಿ ಅಲ್ಲ. ನಿಪಿಃ 16 ಹಿರೇಹಾಳ ಗ್ರಾಮಪಂಚಾಯತಿಯಲ್ಲಿ ಆದಂತಹ ಠರಾವು ಅಲ್ಲ ಎಂದರೆ ಸರಿ ಅಲ್ಲ. ನಿಪಿಃ 16 ನ್ನು ನಾನು ದಾವಾ ಆಸ್ತಿ ಕಬಳಿಸಬೇಕು ಎಂದು ಸೃಷ್ಟಿ ಮಾಡಿಕೊಂಡು ಹಾಜರು ಮಾಡಿದ್ದೇನೆ ಎಂದರೆ ಸರಿ ಅಲ್ಲ. ನಿಪಿಃ 2 ಮತ್ತು ಸರ್ವೇ ನಂ.443/7 ಗೂ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ. 2 ನೇ ಪ್ರತಿವಾದಿ ಮತ್ತು ಆಕೆಯ ಹೆಣ್ಣು ಮಕ್ಕಳ ಕಬ್ಜಾದಲ್ಲಿ ದಾವಾ ಆಸ್ತಿ ಇದೆ ಎಂದರೆ ಸರಿ ಅಲ್ಲ. ಈಗಲೂ ಸಹ 1 ನೇ ಪ್ರತಿವಾದಿ ಹೆಸರು ಸರ್ವೇ ನಂ.443/7 ಉತಾರದಲ್ಲಿ ಇದೆ ಎಂದರೆ

ನಿಜ. ಸಾಕ್ಷಿ ಪಂಚಾಯತಿಯ ಉತಾರದಲ್ಲಿ ನಮ್ಮ ಹೆಸರು ಇದೆಎಂದು ಹೇಳುತ್ತಾರೆ. ಪಂಚಾಯತಿಯ ಉತಾರಕ್ಕೂ ಮತ್ತು ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು 2 ಆಸ್ತಿಗಳು ಒಂದೇ ಎಂದು ಹೇಳುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ನಾನು 1 ನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳಿಗೆ ತಿಳಿಸಿ , ದಾವಾ ಆಸ್ತಿಯನ್ನು ಖರೀದಿ ಹಿಡಿದಿದ್ದೇನೆ. 1 ನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳಿಗೆ ವಿಶ್ವಾಸಕ್ಕೆ ತೆಗೆದುಕೊಂಡು ದಾವಾ ಆಸ್ತಿ ಖರೀದಿ ಮಾಡಿರುತ್ತೇನೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಆ ರೀತಿ ಖರೀದಿ ಆಗಿದ್ದಲ್ಲಿ , 1 ನೇ ಪ್ರತಿವಾದಿಯ ಹೆಂಡತಿ ಮಕ್ಕಳ ಸಹಿಯನ್ನು ಖರೀದಿ ಪತ್ರಕ್ಕೆ ಪಡೆಯುತ್ತಿದ್ದೆ ಎಂದರೆ ಸಾಕ್ಷಿ ಹಿರಿಯರು ಇದ್ದರು , ಅವರ ಸಮಕ್ಷಮ ಖರೀದಿ ಪತ್ರ ಆಗಿದೆ, ಆಗ ನಾವು ಸಣ್ಣವರಿದ್ದೇವು , ಆಗ ನನಗೆ 30 ವರ್ಷ ವಯಸ್ಸು ಇತ್ತು, ಖರೀದಿ ವ್ಯವಹಾರ ಅಷ್ಟೊಂದು ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನಮ್ಮ ಸಂಬಂಧಿಕರಾದ ಕಲ್ಲಪ್ಪ ಜಾಲಿಹಾಳ, ಸಿದ್ದಪ್ಪ ಕುರಿ ಇದ್ದರು. ಸಾಕ್ಷಿ ಮುಂದುವರೆದು ಅವರು ಇಬ್ಬರಿಗೂ ಬೇಕಾದವರು ಎಂದು ಹೇಳುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

**6.** 1 ನೇ ಪ್ರತಿವಾದಿ ಆ ಸಮಯದಲ್ಲಿ ಸರ್ಕಾರಿ ಕೆಲಸ ಮಾಡಿ, ನಿವೃತ್ತಿಯಾಗಿದ್ದರು. ನಿವೃತ್ತಿಯಿಂದ ಅವರಿಗೆ ಸಾಕಷ್ಟು ಹಣ ಬಂದಿತ್ತು ಎಂದರೆ ನಿಜ. ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಕುಟುಂಬಕ್ಕೆ ಸಾಕಷ್ಟು ಹಣ ಬಂದಿದ್ದರಿಂದ

ಅವರಿಗೆ ಹಣದ ಅಡಚಣೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು 1 ನೇ ಪ್ರತಿವಾದಿಗೆ ಪುಸಲಾಯಿಸಿ, ರೋಣಕ್ಕೆ ಕರೆದುಕೊಂಡು ಬಂದು, ಅವನಿಗೆ ತಿಳುವಳಿಕೆಗೆ ಬಾರದಂತೆ ಸುಳ್ಳು ಖರೀದಿ ಪತ್ರ ಮಾಡಿಸಿದ್ದೇನೆ ಎಂದರೆ ಸರಿ ಅಲ್ಲ. ಖರೀದಿ ಪತ್ರದ ಆಧಾರದ ಮೇಲೆ ನನಗೆ ದಾವಾ ಆಸ್ತಿ ಮೇಲೆ ಮತ್ತು ವಿ.ಪಿ.ಸಿ. ನಂ.1445 ಆಸ್ತಿಯ ಮೇಲೆ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ  ಎಂದರೆ ಸರಿ ಅಲ್ಲ. ದಾವಾ ಆಸ್ತಿಯ ಮೇಲೆ ಪ್ರತಿವಾದಿ ಇದುವರೆಗೂ ಕಬ್ಜಾ ಹೊಂದಿದ್ದಾರೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಯನ್ನು ನಾನು ಖರೀದಿ ಪತ್ರದ ಪ್ರಕಾರ ತೋರಿಸಿಲ್ಲ ಎಂದರೆ ಸರಿ ಅಲ್ಲ. ನನ್ನ ದಾವೆಯಲ್ಲಿ ನಾನು ತೋರಿಸಿದ ಆಸ್ತಿಯೇ ಬೇರೆ , ಹಾಗೂ ಕೇಳುತ್ತಿರುವ ಪರಿಹಾರ ಬೇರೆ ಎಂದರೆ ಸರಿ ಅಲ್ಲ. ಆ ಕಾರಣದಿಂದ ನನ್ನ ದಾವೆ ಕಾಯ್ದೆಯಿಂದ ನೆಡೆಯುವುದಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿ ಯಾವ ಬಾಡಿಗೆ ಗುಂಡಾಗಳನ್ನು ಕರೆದುಕೊಂಡು ಬಂದು ನನ್ನನ್ನು ಹೆದರಿಸಿದ್ದಳು ಎಂದು ಬರೆಸಿದ್ದು, ಅವರ ಹೆಸರು ನನಗೆ ಈಗ ನೆನಪಿಲ್ಲ. ನಾನು ಖಾಯಂ ಧಾರವಾಡದಲ್ಲಿ ವಾಸವಾಗಿದ್ದೇನೆ ಎಂದರೆ ನಿಜ. ತಂಟೇ ಆಸ್ತಿಯಲ್ಲಿ ನಾನು ಯಾವತ್ತೂ ಕಬ್ಜಾದಲ್ಲಿ ಇಲ್ಲ ಮತ್ತು ಮಾಲೀಕ ಅಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿಗೆ ಈ 2 ಗುಂಟೆ ಆಸ್ತಿ ಬಿಟ್ಟು ಬೇರೆ ಯಾವುದೇ ಆಸ್ತಿ ಹಿರೇಹಾಳ ಗ್ರಾಮದಲ್ಲಿ ಇಲ್ಲ ಎಂದರೆ ಸರಿ ಅಲ್ಲ. ಹೇಗಾದರೂ ಮಾಡಿ , ಪ್ರತಿವಾದಿಗಳ ಆಸ್ತಿಯನ್ನು ಕಬಳಿಸಿ , ಅವರನ್ನು ಬೀದಿಯಲ್ಲಿ ನಿಲ್ಲಿಸಬೇಕು ಎಂದು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಮುಖ್ಯ ವಿಚಾರಣಾ

ಪ್ರಮಾಣ ಪತ್ರದಲ್ಲಿ ಕಾಣಿಸಿದ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿ ಅಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**